# ಸುದ್ದಿಯಲ್ಲಿರುವ ಗಾಂಧಿ!

■ ಪ್ರವೀಣ ಕುಲಕರ್ಣಿ



ದೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ದಮನವಾಗುತ್ತಿರುವ ಕುರಿತು ಕೂಗು ಕೇಳಿ ಬರುತ್ತಿರುವ ಈ ಹೊತ್ತಿನಲ್ಲಿ ಯಾರಿಗೂ ಹೆದರದೆ, ಹೇಳಬೇಕಾದುದನ್ನು ನೇರ ಹಾಗೂ ಅಷ್ಟೇ ನಿಷ್ಠುರವಾಗಿ ಹೇಳುತ್ತಿರುವ ಒಬ್ಬ ವ್ಯಕ್ತಿಯೆಂದರೆ ಅದು ತುಷಾರ್ ಗಾಂಧಿ. 'ಗಾಂಧಿ' ಎಂಬ ಮನೆತನದ ಹೆಸರಿನ ಪ್ರತಿಷ್ಠೆಯ 'ಬಲ'ವನ್ನು ಬದಿಗಿಟ್ಟು ಕೂಡ ಅಧಿಕಾರಸ್ಥರ ಮುಖಕ್ಕೆ ಹೊಡೆದಂತೆ ಇದ್ದ ಸಂಗತಿಯನ್ನು ಇದ್ದಂತೆ ಹೇಳಬಲ್ಲ ಛಾತಿವಂತ ಅವರು. ಅದೇ ಕಾರಣಕ್ಕೆ ವಿವಾದಗಳನ್ನು ತಾವೇ ಮುಂದಾಗಿ ಮೈಮೇಲೆ ಎಳೆದುಕೊಳ್ಳುವವರು.

ತುಷಾರ್ ಗಾಂಧಿ ಅವರು ಮಹಾತ್ಮ ಗಾಂಧೀಜಿಯವರ ಮರಿ ಮೊಮ್ಮಗ. ಅಂದರೆ ಗಾಂಧೀಜಿಯವರ ಪುತ್ರ ಮಣಿಲಾಲ್ ಅವರ ಮಗನ (ಅರುಣ್ ಮಣಿಲಾಲ್) ಮಗ. ಲೇಖಕ ಹಾಗೂ ಪ್ರಖರ ಚಿಂತಕರಾಗಿ ತುಷಾರ್ ಲೋಕಪ್ರಸಿದ್ಧರು. ಹಾಗೆಯೇ ಈಗಿನ ಹಿಂದುತ್ವ ಸಿದ್ಧಾಂತದ ಕಟ್ಟಾ ವಿರೋಧಿಯಾಗಿಯೂ ಗುರ್ತಿಸಿಕೊಂಡವರು. 'ನಮ್ಮ ವಿನಾಶದ ಬೀಜ'ವನ್ನು ಬಿತ್ತುತ್ತಿರುವ ಮೋದಿ ಸರ್ಕಾರದ ಸಿದ್ಧಾಂತಕ್ಕೆ ಮತ್ತು ಅದರ ಧೋರಣೆಗೆ ಸದ್ಯ ನಡೆದಿರುವ ನಾಥೂರಾಮ್ ಗೋಡ್ಸೆಯ ಆರಾಧನೆಯೇ ಸಾಕ್ಷಿ' ಎಂದು ಮುಲಾಜಿಲ್ಲದೆ ಹೇಳುತ್ತಾರೆ ತುಷಾರ್. 'ಹಿಂದುತ್ವವನ್ನು ರಾಷ್ಟ್ರೀಯತೆಯಾಗಿ ಬಿಂಬಿಸಲಾಗುತ್ತಿದೆ. ಆದರೆ, ಅದು ರಾಷ್ಟ್ರೀಯತೆ ಅಲ್ಲ, ಮತಾಂಧತೆ' ಎಂದು ಅವರು ವ್ಯಾಖ್ಯಾನಿಸುತ್ತಾರೆ. 'ನಮ್ಮ ದ್ವೇಷವು ನಮ್ಮನ್ನು ತಿನ್ನುತ್ತದೆ, ನಾವು ಬದುಕಬೇಕಾದರೆ, ದ್ವೇಷದ ವಿಷವನ್ನು ಹೊರಹಾಕಲೇಬೇಕು' ಎಂದೂ ಅವರು ಕರೆಕೊಡುತ್ತಾರೆ.

ಭಿನ್ನ ವಿಚಾರಧಾರೆಯ ಮೂಲಕ ದೇಶದ ಗಮನ ಸೆಳೆಯುತ್ತಿರುವ ಈ ಚಿಂತಕ, ಯಾವ ಹಿತಾಸಕ್ತಿಗಳಿಗೂ ಮಣಿಯದವರು. ಹಾಗೆಯೇ ಅಧಿಕಾರಸ್ಥರ ಎದುರು ಮಂಡಿಯೂರದವರು. ಮುತ್ತಜ್ಜ ಗಾಂಧೀಜಿ ಪ್ರತಿಪಾದಿಸಿದ ಸಿದ್ಧಾಂತಗಳ ಮೇಲೆ ಅಪರಿಮಿತವಾದ ಒಲುಮೆ ಬೆಳೆಸಿಕೊಂಡವರು. ದಂಡಿ ಸತ್ಯಾಗ್ರಹದ ಐತಿಹಾಸಿಕ ಘಟನೆ ನಡೆದು 2005ರಲ್ಲಿ 75 ವರ್ಷಗಳು ತುಂಬಿದಾಗ, ಚರಿತ್ರೆಯನ್ನು ಮರು ಸೃಷ್ಟಿಸುವಂತಹ ದಂಡಿ ಯಾತ್ರೆಯನ್ನು ತಾವೇ ಮಾಡಿದವರು.

ಅಪ್ಪ ಅರುಣ್ ಮಣಿಲಾಲ್ ನಟನಾಗಿದ್ದರು. ಅಮ್ಮ ಸುನಂದಾ ಸಂಶೋಧಕಿ. ಹೀಗಾಗಿ ವಿಷಯದ ಆಳಕ್ಕೆ ಇಳಿಯುವ ಮತ್ತು ಅದನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸುವ ಗುಣ ಅವರಲ್ಲಿ ರಕ್ತಗತವಾಗಿ ಬೆಳೆದಿದೆ. ಅವರು ಓದಿದ ಕೋರ್ಸ್ ಕೂಡ ವಿಶಿಷ್ಟವಾದುದು. ಪ್ರಿಂಟಿಂಗ್ ಟೆಕ್ನಾಲಜಿಯಲ್ಲಿ ಡಿಪ್ಲೊಮಾ ಪದವಿ ಪಡೆದಿರುವ ಅವರು, ಮುಂದೆ ಲೇಖಕರಾಗಿ ಬೆಳೆದರು. ಆದರೆ, ಸ್ವಯಂಸೇವಾ ಸಂಸ್ಥೆಗಳ ಮೂಲಕ ಸಮಾಜ ಸೇವೆಯನ್ನೇ ತಮ್ಮ ನೆಚ್ಚಿನ ಕಾಯಕವನ್ನಾಗಿ ಮಾಡಿಕೊಂಡರು. ಮಹಾತ್ಮ ಗಾಂಧಿ ಫೌಂಡೇಷನ್, ಲೋಕಸೇವಾ ಟ್ರಸ್ಟ್, ಗಾಂಧಿ ಸಂಶೋಧನಾ ಪ್ರತಿಷ್ಠಾನ, ಮಹಾರಾಷ್ಟ್ರ ಗಾಂಧಿ ಸ್ಮಾರಕ ನಿಧಿ ಮೊದಲಾದ ಸಂಘಟನೆಗಳ ಜತೆ ನಿಕಟವಾಗಿ ಕೆಲಸ ಮಾಡಿದವರು.

ನಾಥೂರಾಮ್ ಗೋಡ್ಸೆಯಿಂದ ಗಾಂಧಿ ಹತ್ಯೆಯಾದ ಘಟನೆಯನ್ನು ಆಧರಿಸಿದ ಕಮಲ್ ಹಾಸನ್ ಅವರ 'ಹೇ ರಾಮ್' ಚಿತ್ರದಲ್ಲಿ ತುಷಾರ್ ನಟಿಸಿದ್ದರು. 'ರೋಡ್ ಟು ಸಂಗಮ್' ಎಂಬ ಧಾರಾವಾಹಿಯನ್ನೂ ಅವರು ನಿರ್ಮಿಸಿದ್ದರು. 2007ರಲ್ಲಿ ಅವರು ರಚಿಸಿದ 'ಲೆಟ್ಸ್ ಕಿಲ್ ಗಾಂಧಿ' ಕೃತಿ ಭಾರೀ ಸದ್ದು ಮಾಡಿತ್ತು. 'ಗಾಂಧಿ ಹತ್ಯೆಗೆ ಬ್ರಾಹ್ಮಣರೇ ಕಾರಣ' ಎಂಬ ಅವರ ಅಭಿಪ್ರಾಯ ವ್ಯಾಪಕ ಬೆಂಬಲದ ಜತೆಗೆ ಅಷ್ಟೇ ಟೀಕೆಯನ್ನೂ ಎದುರಿಸಿತ್ತು. ಆಗ ತುಷಾರ್ 'ಪುಣೆಯ ಕೆಲವು ಬ್ರಾಹ್ಮಣರ ಗುಂಪುಗಳು ನನ್ನ ಮುತ್ತಜ್ಜನ ಬಲಿಗಾಗಿ ನಿರಂತರವಾಗಿ ಹಾತೊರೆಯುತ್ತಿದ್ದವು. ನನ್ನ ಅಭಿಪ್ರಾಯ ಆ ಗುಂಪುಗಳ ಕುರಿತಾಗಿತ್ತೇ ಹೊರತು ಇಡಿಯಾಗಿ ಆ ಸಮುದಾಯದ ಕುರಿತಾಗಿ ಅಲ್ಲ' ಎಂದು ವಿವರಿಸಿದ್ದರು. 'ದಿ ಲಾಸ್ಟ್ ಡೈರಿ ಆಫ್ ಕಸ್ತೂರ್, ಮೈ ಬಾ' ಕೃತಿಯನ್ನೂ ಬರೆದಿರುವ ತುಷಾರ್, ಮುತ್ತಜ್ಜಿಯ ನೆನಪಿಗಾಗಿ ತಮ್ಮ ಮಗಳಿಗೆ ಕಸ್ತೂರ್ ಎಂದೇ ಹೆಸರಿಟ್ಟಿದ್ದಾರೆ.

ಸಂಘ ಪರಿವಾರದ ಕಟುಟೀಕಾಕಾರರಾದ ತುಷಾರ್, 'ತಮ್ಮ ವಸಾಹತುಶಾಹಿ ಒಡೆಯರ ಸೋಲನ್ನು ಒಪ್ಪಿಕೊಳ್ಳಲಾಗದೆ ಸಂಘ ಪರಿವಾರದವರು ತ್ರಿವರ್ಣ ಧ್ವಜವನ್ನು ಹಾರಿಸುತ್ತಲೇ ಇರಲಿಲ್ಲ' ಎಂದು ಹೇಳಿದ್ದರು. ಅಮೆರಿಕದ ಜಾಹೀರಾತು ಸಂಸ್ಥೆಯೊಂದರ ಜತೆ ಗಾಂಧೀಜಿಯವರ ಚಿತ್ರವನ್ನು ಬಳಸಿಕೊಳ್ಳಲು ಅವರು ಒಪ್ಪಂದ ಮಾಡಿಕೊಂಡಾಗ ಸಾರ್ವಜನಿಕ ವಲಯದಿಂದ ತೀವ್ರ ಪ್ರತಿರೋಧ ವ್ಯಕ್ತವಾಗಿತ್ತು. ಆಗ ಒಪ್ಪಂದದಿಂದಲೇ ಹಿಂದೆ ಸರಿದಿದ್ದರು ತುಷಾರ್. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುರುಮಾಡಿದ ಡಿಜಿಟಲ್ ರೂಪಾಯಿಯಲ್ಲಿ ಗಾಂಧಿ ಚಿತ್ರವನ್ನು ಹಾಕದಿದ್ದಾಗ, 'ಎಲ್ಲ ನೋಟುಗಳಿಂದಲೂ ಗಾಂಧಿ ಚಿತ್ರವನ್ನು ತೆಗೆದುಬಿಡಿ' ಎಂದೂ ಅವರು ಆಕ್ರೋಶ ವ್ಯಕ್ತಪಡಿಸಿದ್ದರು. ರಾಹುಲ್ ಗಾಂಧಿ ಅವರ 'ಭಾರತ್ ಜೋಡೊ' ಯಾತ್ರೆಯಲ್ಲಿ ಪಾಲ್ಗೊಂಡು ಬೆಂಬಲವನ್ನೂ ಸೂಚಿಸಿದ್ದರು. ಸುತ್ತಲಿರುವ ವಿವಾದಗಳು ಏನೇ ಇರಲಿ, ಸದಾ ಕ್ರಿಯಾಶೀಲರಾಗಿರುವ ವ್ಯಕ್ತಿತ್ವ ತುಷಾರ್ ಅವರದು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65